ನಿ-330
ಕ್ರ-109

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಶ್ರೀ ಮರಿತಿಬ್ಬೇಗೌಡ, ಶ್ರೀ ಪಿ.ಆರ್. ರಮೇಶ್, ಶ್ರೀ ಎಸ್. ರವಿ, ಶ್ರೀ ಪ್ರಕಾಶ್ ಕೆ. ರಾಥೋಡ್, ಶ್ರೀ. ಸಲೀಂ ಅಹ್ಮದ್ ಹಾಗೂ ಶ್ರೀ ನಸೀರ್ ಅಹ್ಮದ್ , ಇವರ ನಿಯಮ - 330 ರಡಿ ಪ್ರಸ್ತಾಪಿಸಿರುವ ಸೂಚನೆ ಗೆ ಲೋಕೋಪಯೋಗಿ ಇಲಾಖೆಯ ಮಾಹಿತಿ

**ವಿಷಯ:** ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಬೆಂಗಳೂರು ಟರ್ಫ್ ಕ್ಲಬ್ ಗೆ ಹಣವಂತರು ಮನರಂಜನೆಗಾಗಿ ಬಡ ಮತ್ತು ಮಧ್ಯಮ ವರ್ಗದವರು ಧಿಡೀರ್ ಶ್ರೀಮಂತರಾಗುವ ಕನಸುಗಳೊಂದಿಗೆ ಹಾಗೂ ಇನ್ನೂ ಕೆಲವರು ಒಂದು ಕ್ರೀಡೆಯಾಗಿ ಆನಂದಿಸುವ ಜಾಗ. ಆದರೆ, ಈ ಟರ್ಫ್ ಕ್ಲಬ್ ಬಗೆಗಿನ ಅಕ್ರಮ ಕುರಿತಾದ ದೂರುಗಳು ಹತ್ತು ಹಲವು. ಕೆಲವರಿಗೆ ಇದೊಂದು ನಿಗೂಢ ಪ್ರಪಂಚವೆಂದರೂ ತಪ್ಪಲ್ಲ. ಪ್ರತಿ ರೇಸ್‌ನಿಂದ ಕ್ಲಬ್‌ಗಳಿಗೆ ಬರುತ್ತಿರುವ ಲಾಭ ಮತ್ತು ಆ ಅನುಪಾತದಲ್ಲಿ ಸರ್ಕಾರಕ್ಕೆ ಸಂದಾಯವಾಗುತ್ತಿರುವ ತೆರಿಗೆ ಪ್ರಮಾಣ ಎಷ್ಟು ಎಂಬುದರ ಬಗ್ಗೆ ಸ್ಪಷ್ಟತೆ ಕಾಣುತ್ತಿಲ್ಲ. ಈ ಕ್ಲಬ್ಬಿನ ವಾರ್ಷಿಕ ವರಮಾನ ಮತ್ತು ಜಿ.ಎಸ್.ಟಿ. ಪಾವತಿಯ ಬಗ್ಗೆಗೂ ಅನುಮಾನಗಳಿವೆ. ಕೆಲವೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕಾರಸ್ಥಾನ ಎಂದರೂ ತಪ್ಪಲ್ಲ. ಪತ್ರಕರ್ತರೂ ಸೇರಿದಂತೆ ಹಲವರ ಪ್ರವೇಶಕ್ಕೂ ಸಹ ನಿರ್ಬಂಧಗಳಿವೆ. ಹತ್ತಾರು ಕೋಟಿ ರೂಪಾಯಿಗಳ ಬಾಡಿಗೆ (ಲೀಸ್) ರೂಪದಲ್ಲಿ ಸರ್ಕಾರಕ್ಕೆ ಕ್ಲಬ್ ನಿಂದ ಬಾಕಿ ಇದೆ. ಬಾಕಿ ಪಾವತಿಗೆ ಬೆಂಗಳೂರು ಟರ್ಫ ಕ್ಲಬ್ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡವಿಟ್ ಸಲ್ಲಿಸಿರುವುದನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ 2019-20ರ ನಾಲ್ಕನೇ ವರದಿಯಲ್ಲಿ ಗಮನಿಸಬಹುದಾಗಿದೆ. ಮೈಸೂರು ರೇಸ್‌ಕೋರ್ಸ್ ಲೈಸೆನ್ಸಿಂಗ್ ಅಕ್ಟ್-1952 (ಪ್ರಸ್ತುತ ಕರ್ನಾಟಕ ರೇಸ್ ಕೋರ್ಸ್ ಗಳಿಗೆ ಪರವಾನಗಿ ನೀಡುವ ಕಾಯ್ದೆ, 2020) ಮತ್ತು ಮೈಸೂರು ರೇಸ್‌ಕೋರ್ಸ್ ಲೈಸೆನ್ಸಿಂಗ್ ರೂಲ್ಸ್-1952ರ ಅಧಿನಿಯಮಗಳನ್ನೇ ಸ್ಪಷ್ಟವಾಗಿ ಬೆಂಗಳೂರು ಟರ್ಫ್ ಕ್ಲಬ್ ಉಲ್ಲಂಘಿಸಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದ್ದು, ಮಾನ್ಯ ಹಣಕಾಸು ಸಚಿವರಾಗಿರುವ ಮಾನ್ಯ ಮುಖ್ಯಮಂತ್ರಿಗಳು ಈ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯ ಪರವಾನಿಗೆ ನವೀಕರಣ ಮತ್ತು ರದ್ದತಿ ಬಗೆಗೆ ಕ್ರಮಕೈಗೊಳ್ಳಲು ಸಹ ವರದಿಯಲ್ಲಿ ಶಿಫಾರಸ್ಸು ಆಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸರ್ಕಾರಕ್ಕೆ ಕಾಲಕಾಲಕ್ಕೆ ಸಂದಾಯವಾಗಬೇಕಾಗಿರುವ ತೆರಿಗೆ ಮತ್ತು ಹತ್ತಾರು ಕೋಟಿ ರೂ.ಗಳ ಬಾಡಿಗೆ ಹಣ, ಬೆಂಗಳೂರು ಟರ್ಫ್ ಕ್ಲಬ್ ನಲ್ಲಿಯ ಅಕ್ರಮ ಕೂಟ ಮತ್ತು ಚಟುವಟಿಕೆಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಾರ್ವಜನಿಕರ ಹಿತದೃಷ್ಟಿಯಿಂದ ಈ ವಿಷಯವನ್ನು ನಿಯಮ 330ರಡಿ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರಿದೆ.

*****

**ಉತ್ತರ:** ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಬೆಂಗಳೂರು ಟರ್ಫ ಕ್ಲಬ್ ಸಂಸ್ಥೆಯು ಸರ್ಕಾರಕ್ಕೆ ಪಾವತಿಸಬೇಕಾಗಿರುವ ತೆರಿಗೆ ಹಾಗೂ ಬಾಡಿಗೆ ಹಣವನ್ನು ಬಾಕಿ ಉಳಿಸಿಕೊಂಡಿರುವುದರಿಂದ, ಸಂಸ್ಥೆಯ ಪರವಾನಗಿಯನ್ನು ರದ್ದುಗೊಳಿಸುವ ಕುರಿತಂತೆ, ನಿಯಮ 330ರಡಿ ಪ್ರಸ್ತಾಪಿಸಿರುವ ವಿಷಯ ಕುರಿತು ಈ ಕೆಳಕಂಡಂತೆ ವಿವರಣೆ ನೀಡಲಾಗಿದೆ.

- ಬೆಂಗಳೂರು ಟರ್ಫ್ ಕ್ಲಬ್‌ಗೆ ಗುತ್ತಿಗೆ ಆಧಾರದ ಮೇಲೆ ನೀಡಲಾದ ಲೋಕೋಪಯೋಗಿ ಇಲಾಖೆಯ ಜಮೀನಿನ ಗುತ್ತಿಗೆ ಅವಧಿಯು ದಿನಾಂಕ 31.12.2009 ರಂದು

ಕೊನೆಗೊಳ್ಳುತ್ತಿದ್ದದರಿಂದ, ಆ ದಿನಾಂಕದಿಂದಲೇ ಜಾರಿಗೆ ಬರುವಂತೆ ಗುತ್ತಿಗೆ ಅವಧಿಯನ್ನು ರದ್ದುಗೊಳಿಸಿ ಪೂರ್ಣ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲು ಸರ್ಕಾರದ ಆದೇಶ ದಿ: 25.09.2008ರಲ್ಲಿ ಆದೇಶಿಸಲಾಗಿದೆ.

- ಬೆಂಗಳೂರು ಟರ್ಫ್ ಕ್ಲಬ್‌ರವರು ಜಮೀನನ್ನು ಹಸ್ತಾಂತರಿಸದೆ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ದಿನಾಂಕ 22.03.2010 ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು "ದಿನಾಂಕ 22.09.2010ರ ಒಳಗೆ ರೇಸ್‌ಕೋರ್ಸ್ ಆವರಣವನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ನೀಡುವಂತೆ ಹಾಗೂ ದಿನಾಂಕ 01.01.2010 ರಿಂದ 22.09.2010 ರವರೆಗೆ ಪ್ರತಿ ಮಾಹೆಯಾನ ರೂ.5.00 ಲಕ್ಷಗಳನ್ನು ಪಾವತಿಸುವಂತೆ" ನಿರ್ದೇಶನ ನೀಡಿರುತ್ತದೆ.
- ಬೆಂಗಳೂರು ಟರ್ಫ್ ಕ್ಲಬ್‌ರವರು ಮೇಲ್ಕಂಡ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:22.03.2010ರ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ದಾಖಲಿಸಿರುತ್ತಾರೆ. ದಿನಾಂಕ:07.09.2010ರ ತನ್ನ ಮಧ್ಯಂತರ ಆದೇಶದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು "ಯಥಾಸ್ಥಿತಿ ಕಾಪಾಡಲು" ಸೂಚಿಸಿರುತ್ತದೆ. ತದನಂತರದಲ್ಲಿ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಿರುವುದಿಲ್ಲ.
- ಯಥಾಸ್ಥಿಯ ಕಾಪಾಡುವಂತೆ ತಿಳಿಸಿ ನಿವೇಶನವನ್ನು ವಶಕ್ಕೆ ಪಡೆಯಲು ತಡೆಯಾಜ್ಞೆಯು ಇರುವುದರಿಂದ, ಈ ಹಿನ್ನೆಲೆಯಲ್ಲಿ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯವರು 2009 ರಲ್ಲಿ ಪಾವತಿಸುತ್ತಿದ್ದ ವಾರ್ಷಿಕ ರೂ.25.94 ಲಕ್ಷಗಳನ್ನೇ ಮುಂದುವರೆಸಿಕೊಂಡು ಪ್ರತೀ ವರ್ಷವು ಬಾಡಿಗೆ ಪಾವತಿಸುತ್ತಿರುತ್ತದೆ. ಈ ಬಾಡಿಗೆಯನ್ನು ಹೆಚ್ಚಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ:02.06.2017 ರಂದು ನಡೆಸಿದ ಸಭೆಯಲ್ಲಿ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯ ಗುತ್ತಿಗೆ ಅವಧಿ ಪೂರ್ಣಗೊಂಡ ದಿನಾಂಕ:01.01.2010 ರಿಂದ ಪ್ರಕರಣದಲ್ಲಿ ಅಂತಿಮ ತೀರ್ಪು ನೀಡುವವರೆಗೆ ಸಂಸ್ಥೆಯ ಒಟ್ಟಾರೆ ಆದಾಯದ ಶೇಕಡಾ 2 ರಷ್ಟನ್ನು ವಾರ್ಷಿಕ ಬಾಡಿಗೆ ಎಂದು ನಿಗಧಿಪಡಿಸಲು ನಿರ್ಧರಿಸಲಾಯಿತು.
- ಈ ಹಿನ್ನೆಲೆಯಲ್ಲಿ, ದಿನಾಂಕ:19.11.2019 ರಂದು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ನಡೆಸಿದ ಸಭೆಯಲ್ಲಿ ಸಂಸ್ಥೆಯಿಂದ ಬಾಕಿ ಮೊತ್ತ ವಸೂಲಿ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ ಬಾಕಿ ಬಾಡಿಗೆ ಮೊತ್ತವನ್ನು ವಸೂಲಿ ಮಾಡಲು ಸಚಿವ ಸಂಪುಟದ ಅನುಮೋದನೆಗೆ ಕಡತ ಸಲ್ಲಿಸಲಾಗಿ ದಿನಾಂಕ: 30.12.2019ರಂದು ಸಚಿವ ಸಂಪುಟವು ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿನ ಆದೇಶದವರೆಗೆ ಯಥಾ ಸ್ಥಿತಿ ಮುಂದುವರೆಸಲು ಅನುಮೋದನೆ ನೀಡಿರುತ್ತದೆ.
- ಈ ಹಿನ್ನಲೆಯಲ್ಲಿ ಇಲಾಖೆಯು ಬಾಕಿ ಬಾಡಿಗೆ ಮೊತ್ತವನ್ನು ವಸೂಲಿ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ: 13/14.02.2020ರಂದು ಈ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಅಂತಿಮ ತೀರ್ಪು ಬರುವವರೆಗೆ ಬೆಂಗಳೂರು ಟರ್ಫ್ ಕ್ಲಬ್ ಸಂಸ್ಥೆಯ ಒಟ್ಟಾರೆ ಆದಾಯದ ಶೇಕಡಾ 2 ರಷ್ಟನ್ನು ವಾರ್ಷಿಕ ಬಾಡಿಗೆಯೆಂದು ನಿಗಧಿಪಡಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಸಂಖ್ಯೆ:183571: 2019 ರಲ್ಲಿ ಸಲ್ಲಿಸಿದ್ದು, ವಿಚಾರಣೆಯನ್ನು ಮೇ 2020 ರಲ್ಲಿ ನಿಗಧಿಪಡಿಸಲಾಗಿತ್ತು. ಆದರೆ, ಕೋವಿಡ್

ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ವಿಚಾರಣೆ ನಡೆದಿರುವುದಿಲ್ಲ. ಹಾಗೂ ಪ್ರಸ್ತುತ ವಿಚಾರಣೆಯು ಬಾಕಿ ಇರುತ್ತದೆ.

- ಸರ್ಕಾರಕ್ಕೆ ಬಿಟಿಸಿ ಯಿಂದ ಪ್ರತಿ ಪಂದ್ಯಗಳಿಂದ ತೆರಿಗೆ ಹಣ ಸಂಗ್ರಹವಾಗುತ್ತಿದ್ದು, ಇಲ್ಲಿಯವರೆಗೆ ಲೈಸೆನ್ಸ್ ಪಾವತಿಯಲ್ಲಿ ಯಾವುದೇ ತೊಡಕು ಉಂಟಾಗಿರುವುದಿಲ್ಲ. ಹಾಗೂ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿಳಿಸಿರುವುದರಿಂದ, ಪ್ರಸ್ತುತ ಪಂದ್ಯಗಳನ್ನು ನಡೆಸಲು ಲೈಸೆನ್ಸ್ ನೀಡಲಾಗುತ್ತಿದೆ.
- 2020-21ನೇ ಸಾಲಿಗೆ ಒಟ್ಟು ರೂ. 21.61 ಕೋಟಿಗಳು ಹಾಗೂ 2021-22ನೇ ಸಾಲಿಗೆ 25ನೇ ಜನವರಿ 2022ರವರೆಗೆ ಒಟ್ಟು ರೂ. 5.59 ಕೋಟಿಗಳಷ್ಟು ತೆರಿಗೆ, ಪರವಾನಗಿ ಶುಲ್ಕ ಹಾಗೂ ಇತರೆ ಮೂಲಗಳಿಂದ ಸಂಗ್ರಹವಾಗಿರುತ್ತದೆ.

(ಸಂಖ್ಯೆ: ಲೋಇ 12 ಬಿಎಲ್ ಕ್ಯೂ 2022)

**(ಸಿ.ಸಿ. ಪಾಟೀಲ),**
ಲೋಕೋಪಯೋಗಿ ಸಚಿವರು.